KACD310007432025

Presented on : 05.05.2025
Registered on : 05.05.2025
Decided on : 01.06.2026
Duration : 01 y/00 m/26 days

**ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು.**

ಉಪಸ್ಥಿತರುಃ– ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು.

**ಸಿ ಸಿ. ನಂಬರ್ 382/2025**

**ದಿನಾಂಕಃ 1 ನೇ ಜೂನ್ – 2026.**

ಪಿರ್ಯಾದಿ ಃ ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ
ಆರಕ್ಷಕರು, ಹಿರಿಯೂರು

(ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ –

ಆರೋಪಿತರು ಃ 1. **ಕಿರಣ್ ಎಸ್** ತಂದೆ ಶಿವಣ್ಣ, 24 ವರ್ಷ
2. **ಶಿವಣ್ಣ** ತಂದೆ ಕರಿಯಪ್ಪ, 54 ವರ್ಷ
3. **ನರಸಿಂಹಮೂರ್ತಿ** ತಂದೆ ಶಿವಣ್ಣ, 25 ವರ್ಷ
4. **ಕಂಠಿ ಯಾನೆ ನರಸಿಂಹಮೂರ್ತಿ**
ತಂದೆ ಸೋಮಣ್ಣ ಯಾನೆ ಸೋಮಶೇಖರಪ್ಪ, 26 ವರ್ಷ
5. **ಸೋಮಣ್ಣ ಯಾನೆ ಸೋಮಶೇಖರಪ್ಪ**

SUJATHA SUVARNA B Digitally signed by SUJATHA SUVARNA B Date: 2026.06.02 10:28:29 +0530

ತಂದೆ ನರಸಪ್ಪ, 50 ವರ್ಷ
ಎಲ್ಲರ ವಾಸಃ ಉಪ್ಪಲಗೆರೆ ಗ್ರಾಮ,
ಹಿರಿಯೂರು ತಾಲ್ಲೂಕು.

(ಆರೋಪಿತರ ಪರವಾಗಿಃ ಶ್ರೀ ಎಂ.ಆರ್.ಆರ್, ವಕೀಲರು)

| | | |
|---|---|---|
| ಆರೋಪಿಸಲ್ಪಟ್ಟ ಅಪಾದನೆ | ಃ | ಭಾ.ನ್ಯಾಸಂ ಕಲಂ 115(2),118(1), 189(2), 191(2), 191(2), 191(3) 351(2), 352, 74 ಸಹವಾಚಕ 190 |
| ಆರೋಪದ ದಿನಾಂಕ | ಃ | 17.01.2025 |
| ಆರೋಪ ದಾಖಲಾದ ದಿನಾಂಕ | ಃ | 17.01.2025 |
| ಸಾಕ್ಷ್ಯ ಪ್ರಾರಂಭದ ದಿನಾಂಕ | ಃ | 06.04.2026 |
| ಸಾಕ್ಷ್ಯ ಮುಕ್ತಾಯ ಗೊಂಡ ದಿನಾಂಕ | ಃ | 05.05.2026 |
| ತೀರ್ಪು ಘೋಷಿಸಿದ ದಿನಾಂಕ | ಃ | 01.06.2026 |
| ನ್ಯಾಯಾಧೀಶರ ನಿರ್ಣಯ | ಃ | ಅಂತಿಮ ಆದೇಶ |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

## ತೀರ್ಪು

ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ ಉಪನಿರೀಕ್ಷಕರು 1 ರಿಂದ 5 ನೇ ಆರೋಪಿತರ ವಿರುದ್ಧ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2),118(1), 189(2), 191(2), 191(3), 351(2), 352, 74 ಸಹವಾಚಕ 190 ರಡಿಯಲ್ಲಿ ದಂಡಿಸಬಹುದಾದ ಕೃತ್ಯಗಳನ್ನು ಎಸಗಿರುತ್ತಾನೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪರ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತಿರುತ್ತವೆ.

ದಿನಾಂಕ 17.01.2025 ರಂದು ಮಧ್ಯಾಹ್ನ 3.20 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಉಪ್ಪಳಗೆರೆ ಗ್ರಾಮದ ಕೃಷ್ಣಪ್ಪ ರವರ ಮನೆಯ ಮುಂದಿನ ಸಿಸಿ ರಸ್ತೆಯಲ್ಲಿ 1 ನೇ ಆರೋಪಿಯು ಚಾಸಾ.3 ರವರಿಗೆ ಗಲಾಟೆ ಮಾಡಿ ಹೊಡೆಯುತ್ತಿದ್ದಾಗ ಚಾಸಾ.1 ಮತ್ತು ಚಾಸಾ.2 ರವರು 1 ನೇ ಆರೋಪಿಯನ್ನು ಏಕೆ ಹೊಡೆಯುತ್ತೀಯ ಅಂತ ಕೇಳಿದ್ದಕ್ಕೆ 1 ನೇ ಆರೋಪಿಯು ಚಾಸಾ.1 ರವರಿಗೆ ಏನೇ ಬೋಸುಡಿ ಮತ್ತು ಚಾಸಾ.2 ಮತ್ತು ಚಾಸಾ.3 ರವರಿಗೆ ಸೂಳೆ ಮಕ್ಕಳ, ಬೋಳಿ ಮಕ್ಕಳ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು 2 ಮತ್ತು 3 ನೇ ಆರೋಪಿತರು ಚಾಸಾ.2 ರವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದಿದ್ದು ಹಾಗೂ 1, 3 ಮತ್ತು 4 ನೇ ಆರೋಪಿತರು ಚಾಸಾ.1 ರವರು ಹಾಕಿಕೊಂಡಿರುವ ನೈಟಿಯನ್ನು ಹಿಡಿದು ಎಳೆದಾಡಿ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಅವರ ಚಾರಿತ್ರ್ಯವಧೆ ಮಾಡಿ, 1, 3 ಮತ್ತು 5 ನೇ ಆರೋಪಿತರು ಚಾಸಾ.3 ರವರಿಗೆ ಕಲ್ಲಿನಿಂದ ಎದೆಗೆ ಬೆನ್ನಿಗೆ ಮೈ ಕೈಗೆ ಹೊಡೆದು ಈ ಬಾರಿ ಬದುಕಿದ್ದೀರಿ ಇನ್ನೊಂದು ಸಾರಿ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಪಿರ್ಯಾದಿದಾರರು ದೂರು ನೀಡಿದ್ದು ಸದರಿ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಮಾಡಿ ಆರೋಪಿತರು ಭಾರತೀಯ ನ್ಯಾಯಾ ಸಂಹಿತೆ ಕಲಂ 115(2), 118(1), 189(2), 191(2), 191(3), 351(2), 352, 74 ಸಹವಾಚಕ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ದೋಷಾರೋಪಣಾಪಟ್ಟಿ ಸಲ್ಲಿಸಲಾಗಿರುತ್ತದೆ.

3. ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು 1 ರಿಂದ 5 ನೇ ಆರೋಪಿತರ ವಿರುದ್ಧ ಮೇಲ್ಕಂಡ ಕಲಂಗಳನ್ವಯ ಶಿಕ್ಷಾರ್ಹ ಕೃತ್ಯಗಳ ಬಗ್ಗೆ ಸಂಜ್ಞೆಯನ್ನು

ತೆಗೆದುಕೊಂಡು ಆರೋಪಿತರ ವಿರುದ್ಧ ಸಮನ್ಸ್ ಜಾರಿ ಮಾಡಿದಾಗ ಮೇಲ್ಕಂಡ ಆರೋಪಿತರು ಹಾಜರಾತಿಯನ್ನು ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ನಂತರ ಆರೋಪಿತರಿಗೆ ದೋಷಾರೋಪಣ ಪಟ್ಟಿ ಹಾಗೂ ಅದರಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ನೀಡಲಾಗಿದೆ. 1 ರಿಂದ 5 ನೇ ಆರೋಪಿತರ ವಿರುದ್ಧ ಮೇಲ್ಕಂಡ ಕಲಂಗಳ ರೀತ್ಯಾ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡರು.

4. ಅಭಿಯೋಜನೆಯು ಆರೋಪಿಯ ವಿರುದ್ಧ ಇರುವ ಆರೋಪಗಳನ್ನು ಸಾಬೀತುಪಡಿಸುವುದಕ್ಕೋಸ್ಕರ ಚಾಸಾ.1 ರಿಂದ 11 ರವರ ಪೈಕಿ ಚಾಸಾ.1 ರಿಂದ 3 ರವರನ್ನು ಫ್ರಾಸಾ.1 ರಿಂದ 3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಹಾಗೂ ನಿಪಿ.1 ರಿಂದ ನಿಪಿ.5 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯವರ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ 1 ರಿಂದ 5 ನೇ ಆರೋಪಿತರ ವಿರುದ್ಧ ಯಾವುದೇ ರೀತಿಯ ದಂಡನಾರ್ಹವಾದ ಸಾಕ್ಷ್ಯ ಒದಗಿಸದೇ ಇರುವುದರಿಂದ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **351** ರ ಅನ್ವಯ ಮಾಡಬೇಕಾಗಿದ್ದ ಆರೋಪಿತರ ಹೇಳಿಕೆಯನ್ನು ಕೈಬಿಡಲಾಗಿದೆ. ಆರೋಪಿತರ ಪರ ಯಾವುದೇ ಸಾಕ್ಷಿಯನ್ನು ವಿಚಾರಣೆ ಮಾಡಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

5. ಅಭಿಯೋಜನಾ ಪಕ್ಷದವರ ಪರ ಹಾಗೂ ಆರೋಪಿತರ ಪರ ವಾದವನ್ನು ಕೇಳಲಾಯಿತು.

6. ಈ ಹಿನ್ನಲೆಯಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆ

1. ಅಭಿಯೋಜನೆಯು ದಿನಾಂಕ **17.01.2025** ರಂದು ಮಧ್ಯಾಹ್ಣ **3.20** ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಉಪ್ಪಳಗೆರೆ ಗ್ರಾಮದ ಕೃಷ್ಣಪ್ಪ ರವರ ಮನೆಯ ಮುಂದಿನ ಸಿಸಿ ರಸ್ತೆಯಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡಿದ್ದು ಆದ್ದರಿಂದ ಭಾ.ನ್ಯಾ.ಸಂ.ಕಲಂ **189(2)** ಸಹವಾಚಕ **190** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
2. ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಅಕ್ರಮ ಕೂಟ ಕಟ್ಟಿಕೂಂಡು ಬಂದು ದೊಂಬಿ ಎಬ್ಬಿಸಿದ್ದು ಆದ್ದರಿಂದ ಭಾ.ನ್ಯಾ.ಸಂ.ಕಲಂ **191(2)** ಸಹವಾಚಕ **190** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
3. ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಅಕ್ರಮ ಕೂಟ ಕಟ್ಟಿಕೂಂಡು ಕೈಯಲ್ಲಿ ಕೋಲು ಹಿಡಿದುಕೊಂಡು ಬಂದು ದೊಂಬಿ ಎಬ್ಬಿಸಿದ್ದು, ಆದ್ದರಿಂದ ಭಾ.ನ್ಯಾ.ಸಂ.ಕಲಂ **191(3)** ಸಹವಾಚಕ **190** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
4. ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಬಂದು 1 ನೇ ಆರೋಪಿಯು ಚಾಸಾ.3 ರವರಿಗೆ ಗಲಾಟೆ ಮಾಡಿ ಹೊಡೆಯುತ್ತಿದ್ದಾಗ ಚಾಸಾ.1 ಮತ್ತು 2 ರವರು 1 ನೇ ಆರೋಪಿಯನ್ನು ಏಕೆ ಹೊಡೆಯುತ್ತೀಯ ಎಂದು ಕೇಳಿದ್ದಕ್ಕೆ ಅವರಿಗೆ ಶಾಂತಿಭಂಗವುಂಟು ಮಾಡುವ ಉದ್ದೇಶದಿಂದ ಅವರನ್ನು ಉದ್ರೇಕಿಸುವ ಸಲುವಾಗಿ ಸೂಳೆ ಮಕ್ಕಳ ಬೋಳಿ ಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆದ್ದರಿಂದ ಭಾ.ನ್ಯಾ.ಸಂ.ಕಲಂ **352** ಸಹವಾಚಕ **190** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಬಂದು 2 ಮತ್ತು 3 ನೇ ಆರೋಪಿತರು ಸ್ವಇಚ್ಛೆಯಿಂದ ಚಾಸಾ.2 ರವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ನೋವುಂಟುಪಡಿಸಿದ್ದು ಆದ್ದರಿಂದ ಭಾ.ನ್ಯಾ.ಸಂ.ಕಲಂ115(2) ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
6. ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಬಂದು 1, 3 ಮತ್ತು 4 ನೇ ಆರೋಪಿತರು ಚಾಸಾ.1 ರವರ ಹಾಕಿಕೊಂಡಿರುವ ನೈಟಿಯನ್ನು ಹಿಡಿದು ಎಳೆದಾಡಿ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಅವರ ಚಾರಿತ್ರ್ಯ ವಧೆ ಮಾಡಿದ್ದು ಆದ್ದರಿಂದ ಭಾ.ನ್ಯಾ.ಸಂ.ಕಲಂ 74 ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
7. ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಬಂದು 1, 3 ಮತ್ತು 5 ನೇ ಆರೋಪಿತರು ಚಾಸಾ.3 ರವರಿಗೆ ಕಲ್ಲಿನಿಂದ ಎದೆಗೆ ಬೆನ್ನಿಗೆ ಮೈ ಕೈಗೆ ಹೊಡೆದು ನೋವುಂಟು ಪಡಿಸಿದ್ದು ಆದ್ದರಿಂದ ಭಾ.ನ್ಯಾ.ಸಂ.ಕಲಂ 118(1) ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
8. ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಬಂದು ಪೈಕಿ 1, 3 ಮತ್ತು 5 ನೇ ಆರೋಪಿತರು ಚಾಸಾ.3 ರವರಿಗೆ ಈ ಬಾರಿ ಬದುಕಿದ್ದೀರಿ ಇನ್ನೊಂದು ಸಾರಿ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು ಆದ್ದರಿಂದ ಭಾ.ನ್ಯಾ.ಸಂ.ಕಲಂ 351(2) ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

9. ಆದೇಶ ಏನು ?

7. ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆಃ-

ಅಂಶ ನಂ.1 ರಿಂದ 8 ಃ ನಕಾರಾತ್ಮಕವಾಗಿ
ಅಂಶ ನಂ.9 ಃ ಅಂತಿಮ ಆದೇಶದಂತೆ ಈ ಕೆಳಗೆ ಕಾಣಿಸಿರುವ

**ಃಃ ಕಾರಣಗಳುಃಃ**

**ಅಂಶ ನಂ.1 ರಿಂದ 6ಃ** ಸದರಿ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

8. ಈ ಪ್ರಕರಣದಲ್ಲಿ ಅಭಿಯೋಜನೆಯು ರುಜುವಾತುಪಡಿಸಬೇಕಾಗಿರುವ ಅಂಶಗಳೆಂದರೆ, ದಿನಾಂಕ 17.01.2025 ರಂದು ಮಧ್ಯಾಹ್ನ 3.20 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಉಪ್ಪಳಗೆರೆ ಗ್ರಾಮದ ಕೃಷ್ಣಪ್ಪ ರವರ ಮನೆಯ ಮುಂದಿನ ಸಿಸಿ ರಸ್ತೆಯಲ್ಲಿ 1 ನೇ ಆರೋಪಿಯು ಚಾಸಾ.3 ರವರಿಗೆ ಗಲಾಟೆ ಮಾಡಿ ಹೊಡೆಯುತ್ತಿದ್ದಾಗ ಚಾಸಾ.1 ಮತ್ತು ಚಾಸಾ.2 ರವರು 1 ನೇ ಆರೋಪಿಯನ್ನು ಏಕೆ ಹೊಡೆಯುತ್ತೀಯ ಅಂತ ಕೇಳಿದ್ದಕ್ಕೆ 1 ನೇ ಆರೋಪಿಯು ಚಾಸಾ.1 ರವರಿಗೆ ಏನೇ ಬೋಸುಡಿ ಎಂದು ಮತ್ತು ಚಾಸಾ.2 ಮತ್ತು ಚಾಸಾ.3 ರವರಿಗೆ ಸೂಳೆ ಮಕ್ಕಳ, ಬೋಳಿ ಮಕ್ಕಳ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು 2 ಮತ್ತು 3 ನೇ ಆರೋಪಿತರು ಚಾಸಾ.2 ರವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದಿದ್ದು ಹಾಗೂ 1, 3 ಮತ್ತು 4 ನೇ ಆರೋಪಿತರು ಚಾಸಾ.1 ರವರು ಹಾಕಿಕೊಂಡಿರುವ ನೈಟಿಯನ್ನು ಹಿಡಿದು ಎಳೆದಾಡಿ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಅವರ ಚಾರಿತ್ರ್ಯ ವಧೆ

ಮಾಡಿ, 1, 3 ಮತ್ತು 5 ನೇ ಆರೋಪಿತರು ಚಾಸಾ.3 ರವರಿಗೆ ಕಲ್ಲಿನಿಂದ ಎದೆಗೆ ಬೆನ್ನಿಗೆ ಮೈ ಕೈಗೆ ಹೊಡೆದು ಈ ಬಾರಿ ಬದುಕಿದ್ದೀರಿ ಇನ್ನೊಂದು ಸಾರಿ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಪುರಾವೆಗೊಳಿಸಬೇಕಾಗಿರುತ್ತದೆ.

9. ಅಭಿಯೋಜನೆಯವರು ಚಾಸಾ.1 ರವರನ್ನು ಪ್ರಾಸಾ.1 ಎಂದು, ಚಾಸಾ.2 ರವರನ್ನು ಪ್ರಾಸಾ.2 ಎಂದು ಹಾಗೂ ಚಾಸಾ.3 ರವರನ್ನು ಪ್ರಾಸಾ.3 ಎಂದು ವಿಚಾರಣೆಗೂಳಪಡಿಸಿಕೊಂಡಿದ್ದು, ನಿ.ಪಿ–1 ದೂರು ಎಂದು, ನಿ.ಪಿ–1(ಎ) ಪ್ರಾಸಾ.1 ರವರ ಸಹಿ ಎಂದು, ನಿ.ಪಿ–2 ಸ್ಥಳ ಪಂಚನಾಮೆ ಎಂದು, ನಿ.ಪಿ–2(ಎ) ಪ್ರಾಸಾ.1 ರವರ ಸಹಿ, ನಿ.ಪಿ–3 ಪ್ರಾಸಾ.1 ರವರ ಹೇಳಿಕೆ, ನಿ.ಪಿ–4 ಪ್ರಾಸಾ.2 ರವರ ಹೇಳಿಕೆ, ನಿ.ಪಿ–5 ಪ್ರಾಸಾ.3 ರವರ ಹೇಳಿಕೆ ಗುರುತಿಸಿಕೊಂಡಿರುತ್ತಾರೆ.

10. ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ.2 ರವರು ಅವರ ಗಂಡ, ಚಾಸಾ.3 ರವರು ಅವರ ಮಗ, ಆರೋಪಿತರು ಅವರಿಗೆ ಜಗಳ ಮಾಡಿಲ್ಲ, ಹೊಡಿ ಬಡಿ ಮಾಡಿಲ್ಲ, ಕೈಕಾಲುಗಳಿಂದ ಹೊಡೆದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದಿಲ್ಲ, ಅವರ ಸಮಕ್ಷಮ ಮಹಜರ್ ಮಾಡಿಲ್ಲ ಯಾವುದೇ ವಸ್ತು ಅಮಾನತ್ತು ಪಡಿಸಿಕೊಂಡಿಲ್ಲವೆಂದು ದೂರನ್ನು ಮತ್ತು ಮಹಜರನ್ನು ನಿಪಿ.1 ಮತ್ತು 2 ಎಂದು ಗುರುತಿಸಿಕೊಂಡು ಸಾಕ್ಷ್ಯ ನುಡಿದಿರುತ್ತಾರೆ.

11. ಪ್ರಾಸಾ.2 ಮತ್ತು 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಪರಿಚಯಸ್ಥರು ಎಂದು, ಆರೋಪಿತರು ಅವರಿಗೆ ಜಗಳ ಮಾಡಿಲ್ಲ, ಹೊಡಿ ಬಡಿ ಮಾಡಿಲ್ಲ,

ಕೈಕಾಲುಗಳಿಂದ ಹೊಡೆದಿಲ್ಲ, ಕಲ್ಲುಗಳಿಂದ ಹೊಡೆದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಅವರು ಪೊಲೀಸರಿಗೆ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಅಭಿಯೋಜನೆಯವರು ಪ್ರಾಸಾ.1 ರಿಂದ 3 ರವರು ಅಭಿಯೋಜನೆಗೆ ವ್ಯತಿರಿಕ್ತವಾದ ಸಾಕ್ಷ್ಯ ನುಡಿದಿದ್ದಾರೆಂದು, ಅವರನ್ನು ಪಾಟೀ ಸವಾಲು ಮಾಡಿದಾಗ್ಯೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ ಮತ್ತು ಅವರು ದೋಷಾರೋಪಣೆಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

13. ಈ ಪ್ರಕರಣದಲ್ಲಿ ದೂರುದಾರ ಮತ್ತು ಗಾಯಾಳುಗಳಾದಂತಹ ಪ್ರಾಸಾ.1 ರಿಂದ 3 ರವರು ತಮಗಾದ ಗಾಯಗಳನ್ನು ಮತ್ತು ಘಟನೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಆದ್ದರಿಂದ ಉಳಿದ ಅಭಿಯೋಜನೆ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೈಬಿಡಲಾಗಿದೆ. ಭಾರತೀಯ ಸಾಕ್ಷ್ಯ ಅಧಿನಿಯಮ 1872 ರ ಕಲಂ 154 ರ ಅಡಿಯಲ್ಲಿ ಪ್ರಾಸಾ.1 ರಿಂದ 3 ರವರ ಸಾಕ್ಷ್ಯವನ್ನು ವಿಶ್ಲೇಷಿಸಿದಾಗ **ವಿರುದ್ಧ ಸಾಕ್ಷಿದಾರರು** ಘಟನೆಗೆ ಸಂಬಂಧಿಸಿದಂತೆ ಏನನ್ನು ಹೇಳದಿರುವಾಗ ಉಳಿದ ಸಾಕ್ಷಿದಾರರ ಸಾಕ್ಷ್ಯವು ಉಪಯೋಗವಿಲ್ಲದ್ದು ಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪುಜನ್ಯ **Kathi Odhabhai Bhimabhai V/s. State of Gujarath, AIR 1993 S.C 1193** ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ಪ್ರಾಸಾ.1 ರಿಂದ 3 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿಯಿಂದ ಉಪಯೋಗಕ್ಕೆ ಬಾರದಂತೆ ಇದೆ. ಆದ್ದರಿಂದ ಇಂತಹ ಘಟನೆ ನಡೆದಿದೆ ಎಂಬುದನ್ನು ನಂಬುವಂತಿಲ್ಲ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯವರು 1 ರಿಂದ 5 ನೇ ಆರೋಪಿತರ ವಿರುದ್ಧ ಹೊರಿಸಲಾದ

ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತಾರೆಂದು ನಿರ್ಣಯಿಸಿ ಅಂಶ **1** ರಿಂದ **8** ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**14.ಅಂಶ ನಂ.9ಃ** ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**ಆದೇಶ**

**1** ರಿಂದ **5** ನೇ ಆರೋಪಿತರ ಮೇಲಿನ ಆಪಾದನೆ ಸಾಬೀತಾಗಿರುವುದಿಲ್ಲ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ ಕಲಂ **271(1)** ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **1** ರಿಂದ **5** ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ನ್ಯಾಯಾ ಸಂಹಿತೆ ಕಲಂ115(2), 118(1), 189(2), 191(2), 191(3), 351(2), 352, 74 ಸಹವಾಚಕ 190 ರಡಿಯಲ್ಲಿ ಎಸಗಿದ ಅಪರಾಧಗಳಿಂದ ದೋಷ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಪಿ. ಎಫ್ ನಂ.9/2025 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಒಳ ಹಿಡಿಗಾತ್ರದ ಕಲ್ಲು ಬೆಲೆ ರಹಿತ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ

ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿಃ 01.06.2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

**ಅನುಬಂಧ**

**I ಪಿರ್ಯಾದುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ-**

| | | |
|---|---|---|
| ಪ್ರಾಸಾ-1 | ಃ | ಲಕ್ಷ್ಮೀದೇವಿ |
| ಪ್ರಾಸಾ-2 | ಃ | ಕರೀಸ್ವಾಮಿ |
| ಪ್ರಾಸಾ-3 | ಃ | ಪುನೀತ್ ಕುಮಾರ್ |

**II ಪಿರ್ಯಾದುದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ-**

| | | |
|---|---|---|
| ನಿ.ಪಿ-1 | ಃ | ದೂರು |
| ನಿ.ಪಿ-1(ಎ) | ಃ | ಪ್ರಾಸಾ.1 ರವರ ಸಹಿ |
| ನಿ.ಪಿ-2 | ಃ | ಸ್ಥಳ ಪಂಚನಾಮೆ |
| ನಿ.ಪಿ-2(ಎ) | ಃ | ಪ್ರಾಸಾ.1 ರವರ ಸಹಿ |
| ನಿ.ಪಿ-3 | ಃ | ಪ್ರಾಸಾ.1 ರವರ ಹೇಳಿಕೆ |
| ನಿ.ಪಿ-4 | ಃ | ಪ್ರಾಸಾ.2 ರವರ ಹೇಳಿಕೆ |
| ನಿ.ಪಿ-5 | ಃ | ಪ್ರಾಸಾ.3 ರವರ ಹೇಳಿಕೆ |

**III ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ-**

-ಇಲ್ಲಾ-

**IV ಆರೋಪಿಯ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ-**

-ಇಲ್ಲಾ-

**V ಅಭಿಯೋಜನೆಯ ಪರ ಮುದ್ದೆ ಮಾಲುಗಳು –**

–ಇಲ್ಲಾ–

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

Visit ecourts.gov.in for updates or download mobile app "eCourts Services" from Android or iOS

SUJATHA SUVARNA B

Digitally signed by SUJATHA SUVARNA B
Date: 2026.06.02 10:28:35 +0530